<u>**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ**</u>

<u>**ಸಿ.ಸಿ. 486/2018**</u>

<u>ಸಾಕ್ಷಿದಾರರ ಹೇಳಿಕೆಃ</u>

**ಹೆಸರು** : ಆರ್ ಮಂಜಪ್ಪ ಚಾಸಾಃ **24** ಪ್ರಾಸಾಃ **9**

**ತಂದೆಯ ಹೆಸರು** : ರಾಮಪ್ಪ

**ವಯಸ್ಸು** : 63 ವರ್ಷ

**ವೃತ್ತಿ** : ನಿವೃತ್ತ ಮುಖ್ಯ ಪೇದೆ

**ವಾಸಸ್ಥಳ** : ಚನ್ನಗಿರಿ

ದಿನಾಂಕಃ**13-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-</u>

ನಾನು 2012 ರಿಂದ 2018 ನೇ ಸಾಲಿನವರೆಗೆ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು.

ದಿಃ 12-03-2018 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿ ನ್ಯಾಯಾಲಯಕ್ಕೆ ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ಅದೇ ದಿನ ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡು ಅದೇ ದಿನ ಹೊನ್ನಾಳಿ ಆಸ್ಪತ್ರೆಗೆ ಭೇಟಿ ನೀಡಿ ಮೃತ ಶ್ರೀನಿವಾಸನ ಶವ ಶವಪಂಚನಾಮೆಯನ್ನು ಚಾಸಾ-2 ರಿಂದ 7 ರವರ ಸಮಕ್ಷಮ ಬೆಳಗ್ಗೆ 07-00 ರಿಂದ 09-00 ಗಂಟೆ ಸಮಯದಲ್ಲಿ ಜರುಗಿಸಿ ಮತ್ತು ಮೃತನ ರಕ್ತ

ಸಂಬಂಧಿಕರಾದ ಚಾಸಾ-5 ರಿಂದ 7ರವರ ಹೇಳಿಕೆಗಳನ್ನು ಪಡೆದುಕೊಂಡು ಮತ್ತು ಶವಪಂಚನಾಮೆಯ ಸಮಯದಲ್ಲಿ ಚಾಸಾ-23 ರವರು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ನಂತರ ಮೃತ ದೇಹವನ್ನು ಪಿ ಎಂ ಮಾಡಲು ಚಾಸಾ-19 ರವರಿಗೆ ಹಸ್ತಾಂತರಿಸಿರುತ್ತೇನೆ. ನಂತರ ಚಾಸಾ-21 ರವರನ್ನು ಶವಕಾವಲಿಗೆ ನೇಮಕ ಮಾಡಿ ಪಿ ಎಂ ವರದಿಯಾದ ನಂತರ ಮೃತ ದೇಹವನ್ನು ಅವರ ರಕ್ತ ಸಂಬಂಧಿಕರಿಗೆ ಹಸ್ತಾಂತರಿಸಿರುವಂತೆ ತಿಳಿಸಿರುತ್ತೇನೆ.

ಅದೇ ದಿನ ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ ನಂತರ ಚಾಸಾ-8 ಮತ್ತು 9 ರವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಚಾಸಾ-8 ಮತ್ತು 9 ರವರ ಸಮಕ್ಷಮ ಚಾಸಾ-13 ರವರು ತೋರಿಸಿದಂತೆ ಸ್ಥಳ ಪಂಚನಾಮೆಯನ್ನು ಸಂಜೆ 04-00 ರಿಂದ 05-00 ಗಂಟೆ ಸಮಯದವರೆಗೆ ಜರುಗಿಸಿ ಕಚ್ಚ ನಕಾಶೆಯನ್ನು ತಯಾರಿಸಿ, ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ನಂತರ ಚಾಸಾ-10, 16, 11, 8, 9, 14, 15, 13 ರವರ ಹೇಳಿಕೆಗಳನ್ನು ಮತ್ತು ಮುಚ್ಚಳಿಕೆ ಪತ್ರಗಳನ್ನು ಪಡೆದುಕೊಂಡಿರುತ್ತೇನೆ.

ನಂತರ ಠಾಣೆಗೆ ವಾಪಾಸ್ಸು ಬಂದು ಕೆಎ-02/ಇಪಿ-9607 ಮೋಟಾರ್ ಸೈಕಲ್ ಮತ್ತು ಕೆಎ-15/ಎ-1716 ಮಹಿಂದ್ರಾ ಬುಲೆರೋ ಪಿಕಪ್ ವಾಹನವನ್ನು ಅಮಾನತ್ತು ಪಡಿಸಿಕೊಳ್ಳಲು ಚಾಸಾ-22 ರವರು ಹಾಜರುಪಡಿಸಿದ್ದ ನಂತರ ಚಾಸಾ-10 ಮತ್ತು 11 ರವರಿಗೆ ನೋಟೀಸನ್ನು ಜಾರಿ ಮಾಡಿ ತದನಂತರ ಚಾಸಾ-10, 11 ಮತ್ತು 22 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಅಮಾನತ್ತು ಮಹಜರ್ ಕ್ರಮವನ್ನು ಸಂಜೆ 05-30 ರಿಂದ 06-30 ಗಂಟೆ ಸಮಯದಲ್ಲಿ ಜರುಗಿಸಿ, ಛಾ ಯಾಚಿತ್ರಗಳನ್ನು ತೆಗೆದಿರುತ್ತೇನೆ.

1 ನೇ ಆರೋಪಿ ಸ್ವ ಇಚ್ಚೆಯಿಂದ ಠಾಣೆಗೆ ಹಾಜರಾಗಿದ್ದರಿಂದ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮವನ್ನು ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ನಂತರ 2 ನೇ ಆರೋಪಿಗೆ ನೋಟೀಸನ್ನು ಜಾರಿ ಮಾಡಿ ಮತ್ತು ಪ್ರತ್ಯುತ್ತರವನ್ನು ಪಡೆದುಕೊಂಡಿರುತ್ತೇನೆ. ತದನಂತರ ಚಾಸಾ-17 ರವರಿಗೆ ನೋಟೀಸನ್ನು ಜಾರಿ ಮಾಡಿ ಪ್ರತ್ಯುತ್ತರವನ್ನು ಪಡೆದುಕೊಂಡಿದ್ದು ಸದರಿ ಬೈಕನ್ನು ಅಪಘಾತವಾದ ಸಮಯದಲ್ಲಿ ಚಾಸಾ-12 ರವರು ಚಾಲನೆ

ಮಾಡುತ್ತಿದ್ದು ಅವರಿಗೆ ಚಾಲನೆ ಪರವಾನಿಗೆ ಇಲ್ಲ ಎಂದು ತಿಳಿಸಿದ್ದು ನಂತರ ನಷ್ಟಭರ್ತಿ ಮುಚ್ಚಳಿಕೆಯನ್ನು ಪಡೆದುಕೊಂಡು ವಾಹನಗಳನ್ನು ಬಿಡುಗಡೆ ಮಾಡಿರುತ್ತೇನೆ.

ದಿಃ 12-03-2018 ರಂದು ಚಾಸಾ-23 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-25 ರವರಿಗೆ ಹಸ್ತಾಂತರಿಸಿರುತ್ತೇನೆ.

ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ಚಾಸಾ-1 ರವರ ಮರುಹೇಳಿಕೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಚಾಸಾ-8 ಮತ್ತು 9 ರವರಿಗೆ ನೀಡಿದ ನೋಟೀಸನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು, ಸ್ಥಳ ಮಹಜರ್ ಅನ್ನು ಈಗಾಗಲೇ ನಿಪಿ-4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಡಿ) ಎಂದು, ಕಚ್ಚ ನಕಾಶೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-5(ಡಿ) ಎಂದು, ನಿಪಿ-6 ಮತ್ತು 7 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಚಾಸಾ-15 ರವರ ಹೇಳಿಕೆಯನ್ನು ಈಗಾಗಲೇ ನಿಪಿ-9 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು, ಚಾಸಾ-9 ರವರ ಹೇಳಿಕೆಯನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು, ಚಾಸಾ-14 ರವರ ಮುಚ್ಚಳಿಕೆ ಪತ್ರವನ್ನು ಈಗಾಗಲೇ ನಿಪಿ-11 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು, ಚಾಸಾ-14 ರವರ ಹೇಳಿಕೆಯನ್ನು ಈಗಾಗಲೇ ನಿಪಿ-12 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು,ಚಾಸಾ-15 ರವರ ಮುಚ್ಚಳಿಕೆ ಪತ್ರವನ್ನು ಈಗಾಗಲೇ ನಿಪಿ-13 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-13(ಬಿ) ಎಂದು, ಚಾಸಾ-15 ರವರ ಹೇಳಿಕೆಯನ್ನು ಈಗಾಗಲೇ ನಿಪಿ-14 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು, ಚಾಸಾ-13 ರವರ ಮುಚ್ಚಳಿಕೆ ಪತ್ರವನ್ನು ಈಗಾಗಲೇ ನಿಪಿ-19 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಎಂದು, ಚಾಸಾ-13 ರವರ ಹೇಳಿಕೆಯನ್ನು ಈಗಾಗಲೇ ನಿಪಿ-20 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-21 ಎಂದು, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು, ಶವಪಂಚನಾಮೆಯನ್ನು ನಿಪಿ-22 ಎಂದು, ಸಾಕ್ಷಿಯ 2 ಸಹಿಗಳನ್ನು ನಿಪಿ-22(ಎ) ಮತ್ತು

22(ಬಿ) ಎಂದು, ಶವಪಂಚನಾಮೆಯ ಸಮಯದಲ್ಲಿ ತೆಗೆದ 2 ಛಾಯಾಚಿತ್ರಗಳನ್ನು ನಿಪಿ-23 ಮತ್ತು 24 ಎಂದು, ವಾಹನ ಅಮಾನತ್ತು ಮಹಜರ್ ಅನ್ನು ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು, ವಾಹನ ಅಮಾನತ್ತು ಮಹಜರ್ ಸಮಯದಲ್ಲಿ ತೆಗೆದ 2 ಛಾಯಾಚಿತ್ರಗಳನ್ನು ನಿಪಿ-26 ಮತ್ತು 27 ಎಂದು, 65 ಬಿ ಪ್ರಮಾಣ ಪತ್ರವನ್ನು ನಿಪಿ-28 ಎಂದು, ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು, 2 ನೇ ಆರೋಪಿಗೆ ನೀಡಿದ ನೋಟೀಸನ್ನು ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು, ಪ್ರತ್ಯುತ್ತರವನ್ನು ನಿಪಿ-30 ಎಂದು, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು, ಚಾಸಾ-17 ರವರಿಗೆ ನೀಡಿದ ನೋಟೀಸನ್ನು ನಿಪಿ-31 ಎಂದು, ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು, ಪ್ರತ್ಯುತ್ತರವನ್ನು ನಿಪಿ-32 ಎಂದು, ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು, 2 ನೇ ಆರೋಪಿ ಮತ್ತು ಚಾಸಾ-17 ರವರು ಬರೆದುಕೊಟ್ಟ ಮುಚ್ಚಳಿಕೆ ಪತ್ರಗಳನ್ನು ಕ್ರಮವಾಗಿ ನಿಪಿ-33 ಮತ್ತು 34 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-33(ಎ) ಮತ್ತು 34(ಎ) ಎಂದು, ಚಾಸಾ-10 ಮತ್ತು 11 ರವರಿಗೆ ನೀಡಿದ ನೋಟೀಸನ್ನು ನಿಪಿ-35 ಎಂದು, ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. 1 ಮತ್ತು 2 ನೇ ಆರೋಪಿತರು ಗೈರು ಹಾಜರಾಗಿದ್ದು ಅವರನ್ನು ಗುರುತಿಸುವ ಬಗ್ಗೆ ಅವರಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲು:- ಆರೋಪಿ ಪರ ವಕೀಲರರಿಂದ:-</u>

ಚಾಸಾ-1 ರವರು ಹೇಳಿದ ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರ.ವ.ವರದಿಯನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಹೊನ್ನಾಳಿ ಆಸ್ಪತ್ರೆಗೆ ಭೇಟಿ ನೀಡಿಲ್ಲ ಮೃತ ಶ್ರೀನಿವಾಸನ ಶವ ಶವಪಂಚನಾಮೆಯನ್ನು ಚಾಸಾ-2 ರಿಂದ 7 ರವರ ಸಮಕ್ಷಮ ಜರುಗಿಸಿಲ್ಲ ಮತ್ತು ಮೃತನ ರಕ್ತ ಸಂಬಂಧಿಕರಾದ ಚಾಸಾ-5 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಮತ್ತು ಶವಪಂಚನಾಮೆಯ ಸಮಯದಲ್ಲಿ ಚಾಸಾ-23 ರವರು ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಮೃತ ದೇಹವನ್ನು ಪಿ ಎಂ ಮಾಡಲು ಚಾಸಾ-19 ರವರಿಗೆ ಹಸ್ತಾಂತರಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-21 ರವರನ್ನು ಶವಕಾವಲಿಗೆ ನೇಮಕ ಮಾಡಿ ಪಿ ಎಂ ವರದಿಯಾದ ನಂತರ ಮೃತ ದೇಹವನ್ನು ಅವರ ರಕ್ತ ಸಂಬಂಧಿಕರಿಗೆ ಹಸ್ತಾಂತರಿಸಿರುವಂತೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿಲ್ಲ ಪಂಚರಿಗೆ ನೋಟೀಸನ್ನು ಜಾರಿ ಮಾಡಿಲ್ಲ ಮತ್ತು ಸ್ಥಳ ಮಹಜರ್

ಕ್ರಮ ಜರುಗಿಸಿಲ್ಲ,  ಕಚ್ಚಾ ನಕಾಶೆಯನ್ನು ತಯಾರಿಸಿಲ್ಲ ಮತ್ತು ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಪಂಚರಿಗೆ ನೋಟೀಸನ್ನು ಜಾರಿ ಮಾಡಿಲ್ಲ ಮತ್ತು ವಾಹನಗಳನ್ನು ಅಮಾನತ್ತು ಪಡಿಸಿಕೊಂಡು ಅಮಾನತ್ತು ಮಹಜರ್ ಕ್ರಮ ಜರುಗಿಸಿ, ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ, ಮರುಹೇಳಿಕೆ ಮತ್ತು ಮುಚ್ಚಳಿಕೆ ಪತ್ರಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಗೆ ನೋಟೀಸನ್ನು ಜಾರಿ ಮಾಡಿಲ್ಲ ಮತ್ತು ಪ್ರತ್ಯುತ್ತರವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-17 ರವರಿಗೆ ನೋಟೀಸನ್ನು ಜಾರಿ ಮಾಡಿಲ್ಲ, ಪ್ರತ್ಯುತ್ತರವನ್ನು ಪಡೆದುಕೊಂಡಿಲ್ಲ ಮತ್ತು ಸದರಿ ಬೈಕನ್ನು ಅಪಘಾತವಾದ ಸಮಯದಲ್ಲಿ ಚಾಸಾ-12 ರವರು ಚಾಲನೆ ಮಾಡುತ್ತಿದ್ದು ಅವರಿಗೆ ಚಾಲನೆ ಪರವಾನಿಗೆ ಇಲ್ಲ ಎಂದು ತಿಳಿಸಿಲ್ಲ ಮತ್ತು ನಷ್ಟಭರ್ತಿ ಮುಚ್ಚಳಿಕೆಯನ್ನು ಪಡೆದುಕೊಂಡು ವಾಹನಗಳನ್ನು ಬಿಡುಗಡೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-23 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಮತ್ತು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಚಾಸಾ-1 ರವರ ಸುಳ್ಳು ಹೇಳಿಕೆಯ ಮೇರೆಗೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿ, ಸುಳ್ಳು ತನಿಖೆಯನ್ನು ನಡೆಸಿ  ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.